ಬಾಗಿಲುಗಳನ್ನು ಹಾದುಬಂದು ನನಗೂ ತಟ್ಟುತ್ತಿದ್ದವು. ಆಮೇಲೆ ಒಳಬಂದು ಅವಳಿಗೆ ಏನೋ ಒಂದಿಷ್ಟು ತಿನ್ನಿಸಿಯೇ ಕಳುಹಿಸುವ ರೂಢಿಯನ್ನು ಲಲಿತೆಯೇ ಒತ್ತಾಯದಲ್ಲಿ ಅಳವಡಿಸಿದ್ದಳು. ಸಹವಾಸದಿಂದ ಸಾಧ್ಯವಾದ ಈ ಸಂಜೀವಿನಿ ವಿಸ್ಮಯ ನನಗೂ ಸಮಾಧಾನವೇ. ಆದರೂ ಒಳಗೆ ಆಳದಲ್ಲೊಂದು ಮುಳ್ಳು ಮತ್ತೆ ಕದಲುತ್ತಿರುವ ಅನಿಸಿಕೆ. ಅರಿತು ಮರೆಗೆ ನೂಕಿ, ಮರೆತು ಕದವಿಕ್ಕಿದ ಕತೆಯೊಂದು ತಾನೇ ತೆರೆದು ನಿಂತಂತೆ. ತಲಕ್ಕಂಟಿನಿಂತ ಅಪರಾಧಿಪ್ರಜ್ಞೆಯನ್ನು ಮೇಲಕ್ಕೆಳೆದು ತಂದಂತೆ. ಒಳಗುದಿಯ ಭಾವವೊಂದು ಬಿಡದೆ ಕಾಡತೊಡಗಿತು. ಬಾಲ್ಯ ಅನ್ನುವುದು ಬದುಕಿನ ಪುಸ್ತಕಕ್ಕೆ ಮುನ್ನುಡಿಯಿದ್ದಂತೆ. ಈ ಅಲ್ಪಕಾಲಾವಧಿಯ ಅನುಭವಗಳು ಮುಂದಿನ ಸುದೀರ್ಘ ಪಯಣದಲ್ಲಿ ಹಲವಾರು ಬಾರಿ ಸಂದರ್ಭೋಚಿತವಾಗಿ ಪ್ರಕಟವಾಗಿ ತಮ್ಮ ಪ್ರಭಾವ ತೋರುತ್ತವೆ. ಅಂಟಿನಿಂತ ನೆನಪಿನ ಆಳಗಳಿಂದ ಕಳಚಿಕೊಂಡು ಮೇಲೆದ್ದು ಬರುತ್ತವೆ.

ನನ್ನಮ್ಮ ಹೈಸ್ಕೂಲ್ ಅಧ್ಯಾಪಕಿ. ಮನೆಗೆ ಬಂದು ಆಕೆಯಲ್ಲಿ ಪಾಠ ಕೇಳಿಕೊಂಡು ಹೋಗುತ್ತಿದ್ದ ಒಬ್ಬಳೇ ಹುಡುಗಿ ಪ್ರೇಮಾ. ತನ್ನ ಗೆಳತಿಯ ಮಗಳು ಅನ್ನುವ ಮಮತೆಯ ಒಡಂಬಡಿಕೆಯಲ್ಲಿ ಈ ರೋಹಿಣಿ ಟೀಚರ್ ಅವಳನ್ನು ತೀರಾ ಮುತುವರ್ಜಿಯಿಂದ ಮುಂದೆ ತಂದಿದ್ದರು. ನನ್ನಲ್ಲಿ ಸಣ್ಣ ಅಸಹನೆಯಿತ್ತು. ಹುಡುಗನಾಗಿದ್ದೂ ನನ್ನ ಬಗೆಗೆ ಅಮ್ಮನಲ್ಲಿ ಅಂತಹ ಪರಿಗಣನೆ ಕಾಣದೆ ಒಂದಿಷ್ಟು ಅಸೂಯೆಯೇ ಇತ್ತು. "ಕಬ್ಬಿಣದ ಆಚಾರಿ" ಎಂದೇ ಊರಲ್ಲಿ ಗುರುತಿಸಿಕೊಂಡಿದ್ದ ದೊಡ್ಡಪ್ಪ ತಾನು ಬಡಿಯುತ್ತಿದ್ದ ಕಬ್ಬಿಣದ ಕಾಠಿಣ್ಯಕ್ಕೆ ತೀರಾ ವ್ಯತಿರಿಕ್ತನಾಗಿ ಸೌಜನ್ಯದ ಸಾಕಾರವಾಗಿದ್ದ. ಮರದ ಕೆಲಸದಲ್ಲಿ ಪರಿಣತನಾದ ಚಿಕ್ಕಪ್ಪ ತನ್ನದಾದ ಸಂಘ, ಪಾರ್ಟಿ, ಭಜನಾಮಂಡಲಿಗಳೊಂದಿಗೆ ನಿರಂತರ ಓಡಾಟದ ಗಡಿಬಿಡಿಗಳಲ್ಲಿ ಮನೆಗೆ ಅಪರೂಪನಾಗಿದ್ದ. ಚಿನ್ನದ ಕುಸುರಿ ಕೈಗಾರಿಕೆಯಲ್ಲಿ ಸಾಕಷ್ಟು ನಯ ನಾಜೂಕುಗಳಿಂದ ಗಮನೀಯವಾಗಿ ಎಲ್ಲರೊಂದಿಗೆ ಸೌಹಾರ್ದ ಸಂಬಂಧಗಳನ್ನು ಗಳಿಸಿ ಉಳಿಸಿಕೊಂಡಿದ್ದ ನನ್ನಪ್ಪ, ಅಜ್ಜ, ಅಜ್ಜಿ ಎಲ್ಲರೂ ಜತೆಗಿದ್ದಾಗ ಮನೆಯೊಂದು ನಂದಗೋಕುಲವೇ. ಮನೆತುಂಬ ಮಕ್ಕಳು. ಸರಸ, ವಿರಸ, ಸ್ನೇಹ, ದ್ವೇಷ, ಅಳು, ನಗು ಎಲ್ಲ ಏರಿಳಿತಗಳನ್ನು ಸೇರಿಸಿದ ಬೃಹತ್ ಸಮಾವೇಶ. ಪ್ರೇಮಾಗೆ ಬದುಕಿನ ಈ ಆಯಾಮಗಳಲ್ಲಿ ಬಹಳವಾದ ಆಕರ್ಷಣೆಯಿತ್ತು. ಆ ಕಾಲಕ್ಕೆ ಪೇಟೆಯಲ್ಲಿ ಹಲವು ಅಂಗಡಿಗಳ, ಕಟ್ಟಡಗಳ, ವ್ಯಾಪಾರಗಳ, ವಹಿವಾಟುಗಳ ಒಡೆತನವಿದ್ದ ಅವಳಪ್ಪ ಮನೆಸೇರುವುದೇ ತಡರಾತ್ರಿಗೆ. ಒಂದು ಹೆರಿಗೆಯೊಂದಿಗೆ ಅದೇನೋ ಒಂದು ಮಂಕುತನ ಆವರಿಸಿ ನಿಂತಿದ್ದ ಅಮ್ಮ ದಿನ ದಿನಕ್ಕೆ ಮೌನದ ಆಳಗಳಲ್ಲಿ ಸೇರಿಕೊಂಡು ಇದ್ದೂ ಇಲ್ಲದಂತಿದ್ದರು. ಮನೆ ತುಂಬಾ ಕೆಲಸದವರ ಕಾರುಬಾರು. ಈಕೆಗೆ ಹೊರಗೊಂದು ಸಂಪನ್ನ ಸಹವಾಸದ ಹಂಬಲ ಸಹಜವಾಗಿತ್ತು. ಅವಳೊಳಗಿನ ಮೌನರಾಗಕ್ಕೆ ದನಿಯಾದ ನಮ್ಮಮ್ಮ, ಮಮತೆಯ ಹಂಬಲಕ್ಕೆ ಒರತೆಯಾಗಿ, ಹೇಳಲಾರದ ತಬ್ಬಲಿತನಕ್ಕೆ ಆಸರೆಯಾದರು. ಯಾವಾಗಲು ಶ್ರುತಿಮಾಡಿದ ವೀಣೆಯಂತಿದ್ದ ಪ್ರೇಮಾ – ಒಂದು ಮಂದ್ರ ಝೇಂಕಾರದಂತಹ ಅನುಭವ, ಹತ್ತಿರ ಹೋದಾಗ – ಅರಿಯದೇ ನಾನೂ ಒಳಗಾದೆ!

ಒಂದೇ ಶಾಲೆಯಲ್ಲಿ ಓದುತ್ತಿದ್ದೆವು. ಪ್ರೇಮಾಗಿಂತ ಒಂದು ವರ್ಷ ಸೀನಿಯರಾಗಿದ್ದೆ. ನಮ್ಮ ಮನೆಮಂದಿ ಎಲ್ಲ ಜಾತಿಗೇ ಸಹಜವೆನ್ನುವಂತೆ ಭಜನೆ, ಹಾಡು, ಚಿತ್ರ, ಕರಕೌಶಲಗಳಲ್ಲಿ ಅಪ್ರಯತ್ನವಾಗಿ ಒಂದು ಗಮನೀಯ ಪರಿಣತಿ ಇದ್ದವರು. ಪ್ರತಿದಿನ ಬರ್ತಾಯಿದ್ದ ಪ್ರೇಮಾ ತನ್ನ ಸೂಕ್ಷ್ಮಸಮಚಿತ್ತದಲ್ಲಿ ಅಳವಡಿಸಿ ಒಂದೊಂದೇ ವಲಯದಲ್ಲಿ ಸ್ವಾಧೀನವಾಗಿ ಮೇಲೇರತೊಡಗಿದ್ದಳು. ಶಾಲೆಯ ಆಟ – ಪಾಠಗಳಲ್ಲಿ ಆಗಾಗ ಸ್ಪರ್ಧೆಗಳಿರುತ್ತಿದ್ದವು. ಮೊದಲಿಗೆಲ್ಲ ಬಹಳವಾಗಿ ನನ್ನದೇ ಹಣೆಪಟ್ಟಿ ಹಚ್ಚಿಕೊಂಡು ಸ್ವಂತವೆನಿಸಿದ್ದ ಬಹುಮಾನಗಳು ಒಂದೊಂದಾಗಿ ಅವಳ ಬಗಲಿಗೆ ಬೀಳತೊಡಗಿದವು. ಇತರ ಹುಡುಗರೊಡನೆ ಸೇರಿಕೊಂಡು ಸ್ವಲ್ಪಮಟ್ಟಿಗೆ ಪ್ರತಿಭಟಿಸಿದೆ. ಅಧ್ಯಾಪಕರ